ಸದರೀ ಮೈನರುಗಳ ಗಾರ್ಡಿಯನ್ ಸುಬ್ಬುಕಾರ್ ರಾಮಪ್ಪನ ಅರ್ಜೀಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ

ಟಿ. ನರಹರರಾವ್,
ಡಿಸ್ಟ್ರಿಕ್ಟು ಜಡ್ಜ.

ಕಡೂರು ಡಿಸ್ಟ್ರಿಕ್ಟು.

ತಾರೀಖು 5ನೇ ಏಪ್ರಿಲ್ 1887.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್‌ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 11ನೇ ಸಂಪುಟ ನಂಬರ್ 35 1884—85 ಯಡೇಹಳ್ಳಿ ಸಬ್ ರಿಜಿಸ್ಟ್ರಾರ್	ಕೊಪ್ಪ ತಾಲ್ಲೂಕು ಮುಡಬೂರ ಮಾಗಣಿ ಚಬ್ಬೆಗ್ರಾಮದಲ್ಲಿ ಇರುವ ಕಾಳೇಗೌಡನ ಮಗ ತಮ್ಮಯ್ಯಗೌಡ	ತೀರ್ಥಹಳ್ಳಿ ತಾಲ್ಲೂಕು ಮಾಳೂರು ಮಾಗಣಿ ಕುದೂರು ಗ್ರಾಮದಲ್ಲಿರುವ ಶೇಷಯ್ಯಗೌಡರ ಮಗ ಮಾನಪ್ಪಗೌಡರಿಗೆ	29ನೇ ಜನವರೀ 1885ನೇ ಇಸವಿ	29ನೇ ಜನವರೀ 1885ನೇ ಇಸವಿ	ಚಬ್ಬೆನಾಡುಗ್ರಾಮದಲ್ಲಿರತಕ್ಕ ಸ್ವತ್ತುಗಳು. 1 ಖಾನೆಷುಮಾರಿ ನಂಬರ್ 111ನೇ ತೆಖ್ತು ಪೋಷ ಹಾಕಿದ ಹಂಚಿನ ಮನೆ 1ಕ್ಕೆ 13 ಅಂಕಣದ ಬಾಬತು. 2. ಸರ್ವೆ ನಂಬರ್ 169ನೇ ಕಾಫೀ ತೋಟ ಯಕರೆ 1–20 ಆಕಾರ 0–12–0 3. ಸರ್ವೆ ನಂ. 170ನೇ ಬಾಗಾಯತು ಯಕರೆ 3–37 ಆಕಾರ 24–0–0 4. ಸರ್ವೇ ನಂ. 172ನೇ ಖೈಕಿ ತರೀ ಯಕರೆ 8–4 ಆಕಾರ 23–4–0. 5. ಸರ್ವೆ ನಂ. 201ನೇ ತರೀ ಯಕರೆ 5–2 ಆಕಾರ 14–0–0 6. ಸರ್ವೆ ನಂ. 191ನೇ ಖುಷ್ಕಿ ಯಕರೆ 14–4 ಆಕಾರ 5–8–0 ಕುಟುಂಬ ಸಂರಕ್ಷಣೆಗೋಸ್ಕರ ನಡಿಸಿದ ಲೇವಾದೇವಿ ಬಾಬತು 400 ರೂಪಾಯಿ ಸಲ್ಲತಕ್ಕಾದ್ದಕ್ಕೆ 4 ವರುಷ ಕಂತಿನಿಂದ ಕೊಡುವದಾಗಿಯೂ ಇದಕ್ಕೆ ಮೇಲ್ಕಂಡ ಸೊತ್ತುಗಳು ದೀಡು ಮಾಡಿರುವದಾಗಿ ಬರಕೊಟ್ಟ ಪತ್ರ.

ಜೆ. ಎಫ್. ಮೈಕಲ್‌ಜಾರ್,
ರಿಜಿಸ್ಟ್ರಾರ್.